ದಿನಾಂಕಃ 01-08-2024 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆಃ ಮಾನ್ಯ ಸ. ಸ. ಅ ರವರಿಂದಃ

ದಿಃ03-5-2017 ರಂದು ಚಾಸ-2 ರವರ ಹೇಳಿಕೆ ಪಡೆದು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ದಿಃ10-5-17 ರಂದು ಚಾಸ-3 ರಿಂದ 5 ರವರ ಹೇಳಿಕೆ ಪಡೆದುಕೊಂಡಿರುತ್ತೇನೆ. ದಿಃ31-5-17 ರಂದು ನಮ್ಮ ಸಿಬ್ಬಂದಿಯಾದ ಚಾಸ-8 ರವರ ಮೂಲಕ ಎಫ್ ಎಸ್ ಎಲ್ ಗೆ ಕಳುಹಿಸಿಕೊಟ್ಟಿರುತ್ತೇನೆ. ದಿಃ01-6-17 ರಂದು ಮೃತಪಟ್ಟ ವೆಂಕಟರಾಯಪ್ಪನವರ ಹಳೇ ಮಾದರಿ ಸಹಿಯನ್ನು ಮತ್ತು ವೆಂಕಟಸ್ವಾಮಿ ರವರ ಮಾದರಿ ಸಹಿಗಳನ್ನು ಹಾಗೂ ಅವರಿಂದ ಬರವಣಿಗೆ ಮಾಡಿಸಿ ಎಲ್ಲಾ ದಾಖಲೆಗಳನ್ನು ಲಕೋಟೆಯಲ್ಲಿ ಹಾಕಿ ವಿ ಎಂದು ನಮೂದು ಮಾಡಿ ಚಾಸ-8 ರವರ ಮೂಲಕ ಎಫ್ ಎಸ್ ಎಲ್ ಗೆ ಕಳುಹಿಸಿಕೊಟ್ಟಿರುತ್ತೇನೆ. ದಿಃ06-6-17 ರಂದು ಹೆಚ್ಚಿನ ಮಾಹಿತಿಗಾಗಿ ಎಫ. ಎಸ್ ಎಲ್ ರವರು ಹಿಂತಿರುಗಿಸಿದ್ದು ದಿಃ10-7-17 ರಂದು ಪಿರ್ಯಾದಾರರ ನೋಟೀಸು ಕೊಟ್ಟು ಇನ್ನು ಹೆಚ್ಚಿನ ಸಹಿಗಳ ಮಾದರಿಗಳು ಮೃತ ವೆಂಕಟರಾಯಪ್ಪನ ಸಹಿ ಬೇಕು ಅಂತ ನೋಟೀಸು ನೀಡಿರುತ್ತೇನೆ, ದಿ14-7-17 ರಂದು ಚಾಸ-1 ರವರು ಕೆಲವು ಮಾದರಿ ಸಹಿಗಳನ್ನು ಹಾಜರುಪಡಿಸಿರುತ್ತಾರೆ. 2 ನೇ ಆರೋಪಿಗೆ ಅಸಲು ಕ್ರಯ ಪತ್ರ ಹಾಜರುಪಡಿಸುವಂತೆ ನೋಟೀಸು ನೀಡಿರುತ್ತೇನೆ. ದಿಃ08-7-17 ರಂದು 2 ನೇ ಆರೋಪಿ ಠಾಣೆಗೆ ಹಾಜರಾಗಿ ನೊಂದಾಯಿತ ಕ್ರಯ ಪತ್ರವನ್ನು ಹಾಜರುಪಡಿಸಿರುತ್ತಾರೆ ಹಾಜರುಪಡಿಸಿದ ಕ್ರಯ ಪತ್ರಕ್ಕೆ ಸಂಬಂಧಿಸಿದಂತೆ ಪಂಚ ಸಾಕ್ಷಿದಾರರಾದ ಚಸಾ6 ಮತ್ತು 7 ರವರ ಸಮಕ್ಷಮ 11 ರಿಂದ 12 ಗಂಟೆಯವರೆಗೆ ದಾಖಲೆಗಳ ಅಮಾನತ್ ಪಂಚನಾಮೆ ಜರುಗಿಸಿರುತ್ತೇನೆ. ದಿಃ27-7-17 ರಂದು ಚಾಸ-8 ರವರ ಮೂಲಕ ಎಫ್ ಎಸ್ ಎಲ್ ವರದಿ ಪಡೆದುಕೊಂಡು ಸ್ವೀಕೃತಿಯನ್ನು ನೀಡಿರುತ್ತೇನೆ. ದಿಃ29-7-17 ರಂದು ನನಗೆ ವರ್ಗಾವಣೆಯಾದ ನಿಮಿತ್ತ ಮುಂದಿನ ತನಿಖೆಗಾಗಿ ಚಾಸ-8 ರವರಿಗೆ ಕಡತವನ್ನು ವಹಿಸಿಕೊಟ್ಟಿರುತ್ತೇನೆ.

ನಿಪಿ-2 ದಾಖಲೆಯಲ್ಲಿನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಸದರಿ ಸಹಿಯನ್ನು ನಿಪಿ-2 (ಡಿ ) ಎಂದು, ನಿಪಿ-3 ದಿಃ08-7-17 ರ ಪಂಚನಾಮೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ-3 (ಸಿ) ಎಂದು, ನಿಪಿ-4 ರಿಂದ 6 ದಾಖಲೆಗಳಲ್ಲಿನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಸದರಿ ಸಹಿಯನ್ನು ನಿಪಿ-4 (ಎ), 5(ಎ), 6(ಎ) ಎಂದು, ನಿಪಿ-7 ದಿಃ27-7-17 ರಂದು ಎಫ್ ಎಸ್ ಎಲ್ ರವರು ನೀಡಿದ ಹಿಂಬಹರವನ್ನು ಸಾಕ್ಷಿ ನೋಡಿ ಗುರುತಿಸಿದ್ದು ನಿಪಿ-7 (ಎ) ಎಂದು, ನಿಪಿ-1 ದೂರಿನಲ್ಲಿ ಇರುವ ಸಾಕ್ಷಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ನಿಪಿ-1 (ಬಿ) ಎಂದು, ಪ್ರ. ವ. ವರದಿಯನ್ನು ನಿಪಿ-8 ಎಂದು ಸಾಕ್ಷಿಯ ಸಹಿಯನ್ನು ನಿಪಿ-8 (ಎ) ಎಂದು ಗುರುತಿಸಲಾಯಿತು.

ಈಗ ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ಗೈರು ಹಾಜರಿರುವ 2 ಮತ್ತು 4 ನೇ ಆರೋಪಿಗಳನ್ನು ಗುರುತಿಸುವಲ್ಲಿ ಆರೋಪಿ ಪರ ವಕೀಲರ ತಕರಾರು ಇರುವುದಿಲ್ಲ ಎಂದು ಸೂಚಿಸಿರುತ್ತಾರೆ.

ಪಾಟೀಸವಾಲುಃ ಆರೋಪಿ ಪರ ವಕೀಲರು ಪಾಟೀಸವಾಲಿಗೆ ಸಮಯ ಕೋರಿದ್ದು, 100 ರೂ ವೆಚ್ಚದೊಂದಿಗೆ ಸಮಯ ನೀಡಲಾಯಿತು.

ಮರುವಿಚಾರಣೆ ಇಲ್ಲಃ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇದೆ,

ಪ್ರಧಾನ ಸಿ.ನ್ಯಾ ಮತ್ತು ಜೆ.ಎಂ.ಎಫ್.ಸಿ.,
ಚಿಂತಾಮಣಿ.